ಇದನ್ನು ಕೇಳಿದ ಜನರೆಲ್ಲ ದುಃಖಿತರಾದರೂ, ರಾಜ ಸಿಂಗರ ಮುಂದೆ ಮಾತನಾಡಲು ಅವರಿಗೆ ಧೈರ್ಯವಾಗಲಿಲ್ಲ. ಮಕ್ಕಳು ಸಿಂಗ ಮಾಮನ ಮುಖವನ್ನೇ ನೋಡುತ್ತಿದ್ದರು. ಆತ ಏನೂ ಹೇಳದೆ ಕುಳಿತಿದ್ದರೂ ಆತನ ತಲೆಯಲ್ಲಿ ಏನೋ ಯೋಚನೆ ನಡೆದಂತಿತ್ತು. ಸಭೆ ಮುಗಿದು ಜನರೆಲ್ಲ ಚದುರಿದರು. ಮಕ್ಕಳು ಹಾಗೂ ಸಿಂಗಳೀಕ ತುಂಬಾ ಹೊತ್ತು ಅಲ್ಲೇ ಕುಳಿತು ಮಾತನಾಡುತ್ತಿದ್ದರು.

ಮರುದಿನ ಬೆಳಿಗ್ಗೆ ಎಂದಿನಂತೆ ಆಟವಾಡಲು ಹೋದ ಮಕ್ಕಳು, ಮಧ್ಯದಲ್ಲಿಯೇ ಆಟವನ್ನು ಬಿಟ್ಟು ಓಡೋಡಿ ಬರುತ್ತಿರುವುದು ಕಾಣಿಸಿತು ಮಕ್ಕಳು ಹೇಳಿದ ವಿಚಾರವನ್ನು ಯಾರಿಗೂ ನಂಬಲಾಗುತ್ತಿರಲಿಲ್ಲ. ಜನರು ಆಶ್ಚರ್ಯದಿಂದ ಮರದ ಕಡೆಗೆ ಹೋಗಿ ನೋಡುತ್ತಿದ್ದರು.

ಅಲ್ಲೊಂದು ಅತಿಶಯ ಕಾದಿತ್ತು. ಮರದ ಕೆಳಗೆ ಬಹಳ ಹಿಂದಿನಿಂದಲೂ ಕೃಷ್ಣನ ಪುಟ್ಟ ವಿಗ್ರಹವೊಂದು ಇತ್ತು. ಈಗ ನೋಡಿದರೆ ಮರದ ಕಾಂಡ ವೊಂದರಿಂದ ಹಾಲು, ಹನಿ, ಹನಿಯಾಗಿ, ಕೆಳಗೆ ಇರಿಸಿದ್ದ ಕೃಷ್ಣನ ವಿಗ್ರಹದ ಮೇಲೆ ಬೀಳುತ್ತಿದೆ. ಇದ್ದಕ್ಕಿದ್ದಂತೆ, ಅಶರೀರವಾಣಿಯೊಂದು ಕೇಳಿಸಿತು 'ಊರಿನ ಜನರೇ, ನಿಮ್ಮನ್ನೆಲ್ಲ ಕಾಪಾಡುವ ನಾನು, ಈ ಊರಿನ ಗ್ರಾಮ ದೇವತೆ. ನಾನು ಈ ಮರದಲ್ಲಿಯೇ ವಾಸವಾಗಿದ್ದೇನೆ. ಈ ಮರವನ್ನು ನಾಶ ಮಾಡಿದರೆ ನಿಮಗೆಲ್ಲ ಅಪಾಯ ತಪ್ಪಿದ್ದಲ್ಲ'. ಜನರೆಲ್ಲ ಭಯಭೀತಿಯಿಂದ ಕೈಜೋಡಿಸಿ ನಿಂತಿದ್ದರು. ಇನ್ನು ಕೆಲವರು ಪೂಜೆ ಮಾಡಲು ಬೇಕಾದ ಸಿದ್ಧತೆಗಳನ್ನು ಆರಂಭಿಸಿದರು. ಇನ್ನು ಕೆಲವರು ಸಿಂಗಳೀಕನ ಸಲಹೆಯನ್ನು ಕೇಳಲು ಅವರ ಮನೆಗೆ ನಡೆದರು.

ಆತನ ಬಳಿ ಚರ್ಚೆ ನಡೆಸಿದ ನಂತರ, ಆತನ ಸಲಹೆಯಂತೆ, ಅರಣ್ಯ ಇಲಾಖೆಯವರನ್ನು ಸಂಪರ್ಕಿಸಲಾಯಿತು. ಮರ ಹಾಗೂ ಮೈದಾನವನ್ನು ತನ್ನದಾಗಿಸಿ, ಧನ ಸಂಪಾದನೆ ಮಾಡಲು ಬಯಸಿದ್ದ ಜಮೀನ್ದಾರನ ತಂತ್ರ ವಿಫಲವಾಯಿತು.

ಇನ್ನು ಮರದಿಂದ ಹಾಲು ತೊಟ್ಟಿಕ್ಕುವುದು ಹಾಗೂ ಅಶರೀರವಾಣಿ ಕೇಳಿಸಿದ್ದು ಹೇಗೆ ಎಂಬುದು ನಿಮ್ಮ ಊಹೆಗೆ ಬಿಟ್ಟಿದ್ದು.

■

# ಮೂರ್ಖ ಕುದುರೆ

■ ನೀ. ಶ್ರೀಶೈಲ ಹುಲ್ಲೂರು
ಜಮಖಂಡಿ




ಹಚ್ಚಹಸಿರು ಕಣಿವೆಯಲ್ಲಿ
ಕುದುರೆಯೊಂದು ಮೇಯ್ದುಕೊಂಡು
ಅಡವಿ ರಾಜನೆಂದುಕೊಂಡು
ಹಿಗ್ಗುತಿದ್ದಿತು

ಆನೆಯೊಂದು ಅಲ್ಲಿ ಬಂದು
ಕರಿಕೆ ತಿಂದು ತೇಗುತಿರಲು
ಅದನು ಕಂಡ ಕುದುರೆ ಮನದಿ
ಉರಿಯತೊಡಗಿತು

ಆನೆಯನ್ನು ಮಣಿಸೊ ಶಕ್ತಿ
ತನಗೆ ಇಲ್ಲವಲ್ಲ ಎಂದು
ಬೇಸರದಲಿ ಮಿಡುಕುತಿರಲು
ಏನೊ ಹೊಳೆಯಿತು

ಆನೆ ವೈರಿ ಹುಲಿಯ ನೆರವು
ಪಡೆಯಬಹುದು ಆದರದುವು
ತನ್ನ ಜೀವ ತೆಗೆವುದೆಂದು
ಅಂಜಿಕೊಂಡಿತು

ಮನುಜನನ್ನು ಆನೆ ಕೊಲೆಗೆ
ಬಳಸಿಕೊಳಲುಪಾಯ ಮಾಡಿ
ಅವನ ಬಳಿಗೆ ಹೋಗಿ ನಿಂದು
ನೆರವು ಬಯಸಿತು

ಕುದುರೆ ತನ್ನ ಹೊತ್ತುಕೊಳಲು
ಸಿದ್ಧವಾದ್ರೆ ಆನೆ ಕತೆಯ
ಮುಗಿಸಬಹುದು ಎಂದು ಮನುಜ
ನಯದಿ ಹೇಳಿದ

ಕುದುರೆ ಒಪ್ಪಿದೊಡನೆ ಅದಕೆ
ಥಡಿ ಲಗಾಮು ಹಾಕಿ ಬಿಗಿದು
ವಿಷದ ಬಾಣ ಹೆಗಲೇರಿಸಿ
ದೂರ ಸಾಗಿದ

ಆನೆ ಕಂಡಕೂಡಲವನು
ಬಿಟ್ಟ ಬಾಣ ನಾಟುತಿರಲು
ಕಿರುಚಿದಾನೆ ವಿಷವು ಏರಿ
ಪ್ರಾಣಬಿಟ್ಟಿತು

ಹರುಷಗೊಂಡ ಕುದುರೆ ಅವಗೆ
ಧನ್ಯವಾದ ಹೇಳುತೆಲ್ಲ
ತನ್ನ ಬಿಟ್ಟು ಬಿಡಲು ಅವನ
ಬೇಡಿಕೊಂಡಿತು

ಕುದುರೆಯೋಟ ನನಗೆ ಖುಷಿಯು
ಬಿಡಲು ನಾನು ಮರುಳನೇನು?
ಎಂದು ಹೇಳಿ ಚಾಟಿಯಿಂದ
ಏಟು ನೀಡಿದ

ಅಂದಿನಿಂದ ಇಂದಿನತನ
ದುರುಳ ಬುದ್ಧಿಗಾಗಿ ಕುದುರೆ
ಮನುಜ ವಶಕೆ ಜೀವ ಕೊಟ್ಟು
ನೋಯುತಿರುವುದು

■